ಅರಣ್ಯ ಪ್ರದೇಶದ ವಿಸ್ತೀರ್ಣದ ಬಗ್ಗೆ

೧೬೩೩. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು? ಇದರಲ್ಲಿ ಎಷ್ಟು ಅಂಶದ ಭಾಗ ಅರಣ್ಯ ನಾಶವಾಗಿದೆ, ಇದಕ್ಕೆ ಕಾರಣ ಕರ್ತರು ಯಾರು ಯಾರು?

ಆ) ಮರ ಕಡಿದರೆ, ಮರ ನೆಡಬೇಕೆಂಬ ನಿಯಮದ ಪ್ರಕಾರ ನೆಟ್ಟಿರುವ ಮರಗಳ ಸಂಖ್ಯೆ ಎಷ್ಟು?

ಇ) ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅರಣ್ಯಗಳ ಸಂಖ್ಯೆ ಎಷ್ಟು? ಮತ್ತು ಅವುಗಳು ಯಾವುವು?

ಈ) ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆಯೇ ಬಾರದೇ ಇರುವುದಕ್ಕೆ ಅರಣ್ಯವಿಲ್ಲದಿರುವುದೇ ಕಾರಣ ಎಂಬುದನ್ನು ಸರ್ಕಾರದವರು ಒಪ್ಪಿದ್ದಾರೆಯೇ ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮಗಳೇನು? ೧೯೮೬-೮೭ರ ವಾಸ್ತವಿಕ ಗುರಿ ;

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ಅರಣ್ಯ ಪ್ರದೇಶವು ೩೮,೬೪೫.೫೪೪ ಚದರ ಕಿಲೋಮೀಟರುಗಳು.

೧೯೫೬ನೇ ಇಸವಿಯಿಂದೀಚೆಗೆ ೨,೦೩,೯೧೩ ಹೆಕ್ಟೇರ್‌ನಷ್ಟು ಅರಣ್ಯವನ್ನು ವಿವಿಧ ಉದ್ದೇಶಗಳಿಗಾಗಿ ನಿಯೋಜಿಸಿದೆ. ಈ ಉದ್ದೇಶಗಳೆಂದರೆ, ವಿವಿಧೋದ್ದೇಶದ ಅಣೆಕಟ್ಟುಗಳ ನಿರ್ಮಾಣದಲ್ಲಿ ಮುಳುಗಡೆಯಾಗಿರುವುದು ಒಕ್ಕಲೆಬ್ಬಿಸಿರುವ ರೈತರ ಪುನರ್‌ವಸತಿಗಾಗಿ ಬೇಸಾಯ ಮತ್ತು ವಿದ್ಯುತ್ ತಂತಿಗಳ ಮಾರ್ಗಕ್ಕಾಗಿ ತೆರವು ಮಾಡಿಕೊಟ್ಟಿರುವುದಾಗಿ ಗಣಿಗಳನ್ನು ಕೊಡುವುದು. ಮತ್ತು ಪಟ್ಟಣಗಳ ನಿರ್ಮಾಣ. ಅನಾವೃಷ್ಟಿ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಜಾನುವಾರುಗಳ ಸಂಖ್ಯೆಯ ಒತ್ತಡದಿಂದಾಗಿ ೧೧,೬೧೦ ಚದರ ಕಿಲೋಮೀಟರ್‌ಗಳಷ್ಟು ಕಾದಿಟ್ಟ ಅರಣ್ಯ ಪ್ರದೇಶವು ಕೆಳದರ್ಜೆಯಾಗಿ ಮರಗಳು ಇಲ್ಲದಂತಾಗಿದೆ.

ಆ) ಸಾಮಾನ್ಯವಾಗಿ ಅರಣ್ಯ ಇಲಾಖೆಯು ಕಡಿದ ಒಂದು ಮರಕ್ಕೆ ಪ್ರತಿಯಾಗಿ ನೂರಕ್ಕೂ ಮಿಗಿಲಾಗಿ ಮರಗಳನ್ನು ನೆಟ್ಟಿದೆ. ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಯು ವತಿಯಿಂದ ಈ ಕೆಳಗೆ ನಮೂದಿಸಿರುವಂತೆ ಮರಗಳನ್ನು ನೆಡಲಾಗಿದೆ.

೧೯೮೪ ೧೨೫೯.೬೧ ಲಕ್ಷ
೧೯೮೫ ೧೪೮೩.೭೨ ಲಕ್ಷ
೧೯೮೬ ೧೩೯೦.೨೫ ಲಕ್ಷ

ಇದಲ್ಲದೆ, ಇಲಾಖೆಯು ಮರಗಳನ್ನು ನೆಡುವುದರ ಜೊತೆಗೆ ಸಸಿಗಳನ್ನು ಜನರಿಗೆ ಅವರ ಖಾಸಗಿ ಜಮೀನುಗಳಲ್ಲಿ ನೆಡಲು ಹಂಚಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ವತಿಯಿಂದ ಹಂಚಿರುವ ಸಸಿಗಳ ವಿವರಗಳು ಈ ರೀತಿ ಇದೆ.

೧. ೧೯೮೪ ೧೦೪೮.೦೦ ಲಕ್ಷ
೨. ೧೯೮೫ ೧೦೬೧.೨೮ ಲಕ್ಷ
೩. ೧೯೮೬ ೯೬೭.೬೯ ಲಕ್ಷ

ಇ) ಕೇಂದ್ರ ಸರ್ಕಾರದ ಒಡೆತನದಲ್ಲಿ ಯಾವ ಅರಣ್ಯವೂ ಇರುವುದಿಲ್ಲ. (ಹಾಗಾದರೂ ಅರಣ್ಯ ಶಾಸ್ತ್ರವೂ ಒಟ್ಟಿಟ್ಟಿಗೆ ಇರುವ ವಿಷಯದ್ದಾಗಿದೆ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ನ್ನೊಳಗೊಂಡು)

ಈ) ಈ ಜಿಲ್ಲೆಯ ಹೆಚ್ಚಿನ ಭಾಗವು ಕಡಿಮೆ ಮಂತ್ರು ಆನಿಶ್ಚಿತ ವಂಳೆಯು ನೆರಳು ಪ್ರದೇಶದಲ್ಲಿಡೆ. ಅರಣ್ಯದ ವಿನಾಶವೂ ಸಹ ಪದೇ ಪದೇ ಸಂಭವಿಸುತ್ತಿರುವ ಕ್ಷಾವಂಕ್ಕೆ ಒಂದು ಕಾರಣವಾಗಿದೆ.

ರಾಜ್ಯದಲ್ಲಿ ಭಾರಿ ಪ್ರಮಾಣದಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಅರಣ್ಯ ಇಲಾಖಾ ವತಿಯಿಂದ ತೆಗೆದುಕೊಳ್ಳಲಾಗಿದೆ. ಹಾಲಿ ಜಿಲ್ಲೆಯಲ್ಲಿರುವ ಕಾರ್ಯಕ್ರಮವು ಈ ರೀತಿ ಇದೆ.

೧೭೯೯ ಹೆಕ್ಟೇರು ಪ್ರದೇಶದಲ್ಲಿ ಸಸಿಗಳನ್ನು ನೆಡುವುದು ಮಂತ್ರು, ೩೫ ಕಿಲೋಮೀಟರು ರಸ್ತೆ ಬದಿಯಲ್ಲಿ ಸಸಿಗಳನ್ನು ನೆಡುವುದು.

ಇದರ ಜೊತೆಗೆ ೪೪.೨೮ ಲಕ್ಷ ಸಸಿಗಳನ್ನು ರೈತರಿಗೆ ಉಚಿತವಾಗಿ ತಮ್ಮ ಖಾಸಗಿ ಜಮೀನಿನಲ್ಲಿ ನೆಡಲು ಹಂಚಲಾಗಿದೆ.

ವಿದ್ಯುತ್ ಸೋರಿಕೆಯ ಬಗ್ಗೆ

೧೩೭೬. ಶ್ರೀ ಕೆ. ಪೆಚ್. ಶ್ರೀನಿವಾಸ (ಶಿವಮೊಗ್ಗ) --ಮಾನ್ಯ ವಾಣಿಜ್ಯ, ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸರಬರಾಜಾಗುತ್ತಿರುವ ವಿದ್ಯುಚ್ಛಕ್ತಿಯಲ್ಲಿ ಸೋರಿಕೆಯು (ಲೈನ್ ಮತ್ತು ಟ್ರಾನ್ಸ್‌ಮಿಶನ್) ಶೇಕಡ ಪ್ರಮಾಣವೆಷ್ಟು? ಹಾಗೂ ಚಾಲ್ತಿ ಇರುವ ವಿದ್ಯುಚ್ಛಕ್ತಿ ದರದಲ್ಲಿ ಸೋರಿಕೆಯಾಗುತ್ತಿರುವ ಒಟ್ಟು ವಿದ್ಯುತ್ ಬೆಲೆ ಎಷ್ಟು?

ಆ) ವಿದ್ಯುತ್ ಸೋರಿಕೆ ಬಗ್ಗೆ ಹೊಸದಾಗಿ ಸಮೀಕ್ಷೆಯನ್ನೆನಾದರೂ ನಡೆಸಲಾಗಿದೆಯೇ?

ಇ) ಒಟ್ಟು ಸೋರಿಕೆಯಾಗುತ್ತಿರುವ ವಿದ್ಯುತ್‌ನಲ್ಲಿ ಕಳ್ಳತನವಾಗುತ್ತಿರುವ ಅಂದಾಜು ಪ್ರಮಾಣವೆಷ್ಟು?

ಈ) ವಿದ್ಯುತ್ ಸೋರಿಕೆಯನ್ನು ಕಡಿಮೆ ಮಾಡಲು ಹಾಗೂ ಕಳ್ಳತನವನ್ನು ಹತ್ತಿಕ್ಕಲು ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೯೮೫–೮೬ನೇ ಸಾಲಿನಲ್ಲಿ ಸುಮಾರು ಶೇಕಡ ೨೧.೮೦ ರಷ್ಟು ವಿದ್ಯುತ್ ಪ್ರಸರಣ ಮತ್ತು ವಿತರಣೆಯಲ್ಲಿ ನಷ್ಟವಾಗಿರಬಹುದೆಂದು ಅಂದಾಜು ಮಾಡಲಾಗಿದೆ. ವಿದ್ಯುತ್ ಪ್ರಸರಣಾ ಮತ್ತು ವಿತರಣೆಯಲ್ಲಿ ಅನೇಕ ಕಾರಣಗಳಿಂದ ನಷ್ಟವಾಗುತ್ತಿರುವುದರಿಂದ ಇದನ್ನು ಕಡಿಮೆ ಮಾಡಬಹುದೇ ವಿನಃ ಪೂರ್ಣವಾಗಿ ತಪ್ಪಿಸಲು ಸಾಧ್ಯವಿಲ್ಲ.

ಆ) ವಿದ್ಯುತ್ ಪ್ರಸರಣಾ ಮತ್ತು ವಿತರಣೆ ವ್ಯವಸ್ಥೆಯಲ್ಲಿ ನಷ್ಟದ ಬಗ್ಗೆ ಸೂಕ್ತ ಕ್ರಮಗಳನ್ನು ಸತತವಾಗಿ ತೆಗೆದು ಕೊಳ್ಳಲಾಗುತ್ತಿದೆ.

ಇ) ಇದನ್ನು ಅಂದಾಜು ಮಾಡಲು ಸಾಧ್ಯವಿಲ್ಲ.

ಈ) ವಿದ್ಯುತ್ ನಷ್ಟ ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

೧. ಹೊಸ ಹೊಸ ಹೆಚ್ಚು ಅಥವಾ ಅತಿ ಹೆಚ್ಚಿನ ಒತ್ತಡದ ವಿದ್ಯುತ್ ಪ್ರಸರಣದ ಮಾರ್ಗಗಳನ್ನು ಎಳೆಯುವುದು.

೨. ಲೋಡ್ ಸೆಂಟರುಗಳಲ್ಲಿ ಹೊಸ ೨೨೦,೧೧೦,೬೬,೩೩, ಕೆ.ವಿ. ಸ್ಟೇಷನ್ನುಗಳನ್ನು ಸ್ಥಾಪಿಸುವುದು.

೩. ಡಿಸೇಲ್ ಅನಿಲ ಟರ್ಬೈನ್ ಸ್ಟೇಷನ್‌ಗಳನ್ನು ಲೋಡ್ ಸೆಂಟರುಗಳಲ್ಲಿ ಅಥವಾ ಅವುಗಳಿಗೆ ಹತ್ತಿರದಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸುವುದು.

೪. ವಿತರಣಾ ಲೈನುಗಳನ್ನು ಬಲಪಡಿಸುವುದು, ಟ್ರಾನ್ಸ್‌ಫಾರ್ಮರುಗಳ ಸಮುದಾಯದಲ್ಲಿ ಬದಲಾವಣೆ ಮಾಡುವುದು.